ನೋಡಿಕೊಳ್ಳೋಣವೆನ್ನಿಸಿತು; ಧೈರ್ಯ ಬರಲಿಲ್ಲ; ಹಳೇ ಕತೆಗಳ ರಾಜರು ಕನ್ನಡಿ ನೋಡಿಕೊಂಡಾಗ ತಮ್ಮ ಪ್ರತಿಬಿಂಬವೇ ಕಾಣದೆ ಬೆಚ್ಚುತ್ತಿದ್ದುದು ನೆನಪಾಗಿ... ಇದೀಗ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವೇ ಕಾಣದಿದ್ದರೇನು ಗತಿ ಎಂದು ದಿಗಿಲಾಯಿತು. ಈ ಲೋಕದಲ್ಲಿ ಯಾರು ಸತ್ತರೂ ಯಾರೂ ತೀರಾ ತಲೆ ಕೆಡಿಸಿಕೊಳ್ಳುವುದಿಲ್ಲ ಎಂದು ತಾವೇ ಯಾವಾಗಲೋ ಡೈರಿಯಲ್ಲಿ ಬರೆದುಕೊಂಡದ್ದು ಮತ್ತೊಮ್ಮೆ ತಮಗೇ ಖಾತ್ರಿಯಾಗುತ್ತಿದೆ ಅನ್ನಿಸಿತು. ಇಂಥ ಗಂಭೀರ ವಿಷಯಗಳನ್ನು ಸುಮ್ಮನೆ ಭಾಷಣದಲ್ಲಿ ಹೇಳುವಾಗಲೋ, ಡೈರಿಯಲ್ಲಿ ಬರೆಯುವಾಗಲೋ ಅವು ಕೇವಲ ಮಾತುಗಳಾಗಿ ಹೊರಬಂದಿರುತ್ತವೆಯೇ ಹೊರತು, ಅವು ಆಳದ ಸತ್ಯವಾಗಿ ನಮ್ಮೊಳಗೆ ಇಳಿದಿರುವುದೇ ಇಲ್ಲ; ಅಂಥ ಸತ್ಯ ಅಕಸ್ಮಾತ್ ಹೊಳೆದರೆ ನಮ್ಮ ನಿಜವಾದ ಬಿಕ್ಕಟ್ಟಿನ ಗಳಿಗೆಯಲ್ಲಿ ಮಾತ್ರ ಸರಿಯಾಗಿ ಹೊಳೆಯುತ್ತದೇನೋ ಎಂದು ಈಗ ರುದ್ರಣ್ಣನವರಿಗೆ ಅನ್ನಿಸತೊಡಗಿತು.

ಮೊದಲನೇ ಹೆಂಡತಿ ಮೊದಲ ಹೆರಿಗೆಯಲ್ಲೇ ತೀರಿಕೊಂಡು, ಅದಾದ ಮೇಲೆ ಎರಡು ವರ್ಷ ಬಿಟ್ಟು ಮದುವೆಯಾದ ಎರಡನೇ ಹೆಂಡತಿಯೂ ಇನ್ನೇನು ತಾನೂ ತೀರಿಕೊಳ್ಳುವ ಕಾಲ ಹತ್ತಿರ ಬರುತ್ತಿರುವಂತೆ ಆಡುತ್ತಿರುವುದು ರುದ್ರಣ್ಣನವರ ನೆನಪಿಗೆ ಬಂದು, 'ಹಾಗಾದರೆ ಇದು ತಾನು ಸಾಯಲು ಸಕಾಲವಿರಬಹುದೇ' ಎನ್ನಿಸಿತು; ಅದರ ಬೆನ್ನಿಗೇ, ಛೇ! ಹಿಂದೆ ವಾಕಿಂಗಿನಲ್ಲಿ ಸಿಕ್ಕುತ್ತಿದ್ದ ಕೃಷ್ಣಸ್ವಾಮಿ, ವೆಂಕಟರಾಮಪ್ಪ ಥರದ ಹಿರಿಯರು ನೂರು ವರ್ಷ ದಾಟಿ ಇನ್ನೂ ಬದುಕಿ ಉಸಿರಾಡುತ್ತಿರುವಾಗ ತನ್ನ ತಲೆಯಲ್ಲಿ ಈ ಕೆಟ್ಟ ಹುಳ ಬಿಟ್ಟ ಆ ಪ್ರಭುದೇವಸ್ವಾಮಿಯನ್ನು ಅಟ್ಟಾಡಿಸಿಕೊಂಡು ಹೊಡೆಯಬೇಕೆನ್ನಿಸಿತು. ಆ ಸಿಟ್ಟಿನ ನಡುವೆಯೇ... ಮೆಲ್ಲಗೆ ತಂಗಾಳಿ ಬೀಸಿದ ಹಾಗೆ ತಾವು ಹಿಂದೆ ಕೆಲಸ ಮಾಡುತ್ತಿದ್ದ ಮದರಾಸ್ ಆಫೀಸಿನಲ್ಲಿದ್ದ ಸಿಂಗಲ್ ವುಮನ್ ರೆಬೆಕ್ಕಾ ರಿಟೈರ್ ಆಗಿದ್ದಾಳಂತೆ ಎಂಬ ಸುದ್ದಿ ನೆನಪಾಗಿ, ಮದ್ರಾಸಿಗೆ ಹೋಗಿ ಅವಳ ಜೊತೆ ಬದುಕಿದರೆ ಹೇಗೆ ಎನ್ನುವ ರೊಮ್ಯಾಂಟಿಕ್ ಆಲೋಚನೆ ಕೂಡ ರುದ್ರಣ್ಣನವರಲ್ಲಿ ಸುಳಿಯಿತು. ರೆಬೆಕ್ಕಾ ಮುಂಗುರುಳು ಹುರುಪು ತುಂಬುತ್ತಿರುವಂತೆ... ಮುಂದೆ... ತಮಗೆ ಬರಬಹುದಾದ... ಇನ್ನೂ ಬಾಕಿಯಿರುವ ಪ್ರಶಸ್ತಿಗಳ ನೆನಪಾಯಿತು. ಹಾಗೂ ಹೀಗೂ ಅವರೂ ಇವರೂ ಹೇಳಿ ಹೇಳಿ ಮೊನ್ನೆ ತಾನೇ ಕೆಂಪೇಗೌಡ ಪ್ರಶಸ್ತಿ ಬಂದಿತ್ತು; ಹಲ್ಲು ಕಚ್ಚಿ ಇನ್ನೊಂದು ಹತ್ತು ವರ್ಷ ಬದುಕಿದರೆ... ಅಷ್ಟು ಹೊತ್ತಿಗೆ ನಮ್ಮವರು ಯಾರಾದರೂ ಕೇಂದ್ರ ಸರ್ಕಾರದಲ್ಲಿ ಸಂಸ್ಕೃತಿ ಖಾತೆಯ ಮಂತ್ರಿಯಾದರೆ ಪದ್ಮಶ್ರೀ ಕೂಡ ಬರಬಹುದು ಅಂತಲೂ ಇದೇ ಪ್ರಭುದೇವಸ್ವಾಮಿಗಳೇ ಹೇಳಿದ್ದರಲ್ಲ ಎಂದು ನೆನಸಿಕೊಂಡರು. ಹಾಂ! ಆ ಪದ್ಮಶ್ರೀ ಪ್ರಶಸ್ತಿ ಕೂಡ ಬರಬೇಕೆಂದಾದರೆ ಇನ್ನೂ ಮಾಡಬೇಕಾದ ಕೆಲವು ಕೆಲಸಗಳಿವೆ; ಸ್ವಾಮಿಗಳ ಮೇಲೆ ಭಾರ ಹಾಕಿ ಕೂತರೆ ಆಗುವುದಿಲ್ಲ; ಡೆಲ್ಲಿ ಕಡೆಯ ನೆಟ್ ವರ್ಕುಗಳನ್ನೆಲ್ಲ ಪಕ್ಕಾ ಮಾಡಿಕೊಳ್ಳಬೇಕಾಗುತ್ತದೆ. ಹಾಂ! ದಿನನಿತ್ಯ ವಾಕಿಂಗಿನಲ್ಲಿ ಕೊನೆಯ ಪಕ್ಷ ನೂರು ನಮಸ್ಕಾರಗಳನ್ನಾದರೂ ಪಡೆಯುವ ತಾನು ಸಾಧ್ಯವಾದರೆ ಮುಂದಿನ ಕಾರ್ಪೊರೇಷನ್ ಚುನಾವಣೆಗೂ ನಿಂತು ಒಂದು ಕೈ ನೋಡಬಹುದಲ್ಲ! ಬ್ಯಾಂಕಿನಲ್ಲಿ ಇರುವ ಇಷ್ಟೊಂದು ದುಡ್ಡನ್ನು ಇಟ್ಟುಕೊಂಡು ಏನು ಮಾಡುವುದು...

ಈ ಥರದ ಯೋಚನೆಗಳು ಉಕ್ಕಿಸಿದ ಹುಮ್ಮಸ್ಸಿನಲ್ಲಿ ವಾಕಿಂಗ್, ಜಾಗಿಂಗ್ ಹೊರಟ ರುದ್ರಣ್ಣ ದಾರಿಯಲ್ಲಿ ಎದುರಾದ ಪರಿಚಯಸ್ಥರ ಕೈಗಳನ್ನು ಸುಮ್ಮಸುಮ್ಮನೆ ಕುಲುಕಿದರು. ಇವತ್ತು ಅವರು ಕುಲುಕಿದ ಕೈಗಳಲ್ಲಿ ನಿತ್ಯ ವಾಕಿಂಗಿನಲ್ಲಿ ಸಿಕ್ಕುವ ತಮ್ಮ ಆಫೀಸಿನ ರಿಟೈರ್ಡ್ ಸೂಪರಿಂಟೆಂಡೆಂಟ್ ಲಕ್ಷ್ಮೀದೇವಮ್ಮನ ಕೈಗಳ ಜೊತೆಗೇ ಅವಳ ಹದಿನೆಂಟರ ಹರೆಯದ ಮಗಳ ಎಳೆಯ ಕೈಗಳೂ ಸೇರಿದ್ದವು. ಬರೀ ಒಂದು ಗಂಟೆಯ ವಾಕಿಂಗಿನಲ್ಲಿ ಇಷ್ಟೆಲ್ಲ ಉತ್ಸಾಹ ಮರಳಿ, ಹೊಸ ಸ್ಪಿರಿಟ್ ಮೈದುಂಬಿದ ಮೇಲಂತೂ, 'ಅಯ್ಯೋ! ಆ ಪ್ರಭುದೇವಸ್ವಾಮಿಗಳು ಯಾರದೋ ಕನಸಿಗೆ